ಮಹಾಲೇಖಪಾಲರ ಪ್ರಕಾರ ಸಂಸ್ಥೆಗಳಿಗೆ ಬಾಕಿ ಇರುವ ಹಣದ ವಿವರಗಳು ಈ ಕೆಳಕಂಡಂತಿರುತ್ತದೆ (ದಿನಾಂಕ 31–3–2005ರಂತೆ)

(ರೂ ಲಕ್ಷಗಳಲ್ಲಿ)

ಸಂಸ್ಥೆಗಳು	2002–03 ಲೆಕ್ಕ
ಎಲ್ ಐ ಸಿ	74766 78
ಜಿ ಐ ಸಿ	7789 64
ನಬಾರ್ಡ್	38902 26
ಎನ್ ಸಿ ಡಿ ಸಿ	7428 38
ಒಟ್ಟು	128887 06

29 (75) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಸೌಕರ್ಯವನ್ನು ಕಲ್ಪಿಸಿ ಕೊಡಲಾಗಿದೆಯೇ,

ಆ) ಹಾಗಿದ್ದಲ್ಲಿ, ಎಷ್ಟು ಕೈಗಾರಿಕೆಗಳಿಗೆ ಸಬ್ಸಿಡಿ ನೀಡಲಾಗುತ್ತಿದೆಯೇ (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು) ,

ಇ) ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿಯನ್ನು ಸರ್ಕಾರ ಯಾವ ಆಧಾರದ ಮೇಲೆ ನೀಡಲಾಗುತ್ತಿದೆ ?

ಶ್ರೀ ಶಿವಾನಂದ ಎಸ್ (ಸಣ್ಣ ಕೈಗಾರಿಕಾ ಸಚಿವರು)

ಅ) ಹೌದು

ಆ)1 1 99 ರಇಂದ 31 03 2006 ಅವಧಿಯಲ್ಲಿ 21656 ಘಟಕಗಳಿಗೆ ಸಹಾಯಧನ ಮಂಜೂರು ಮಾಡಲಾಗಿದೆ ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ

ಇ) ಸಣ್ಣ ಕೈಗಾರಿಕೆಗಳಿಗೆ ಸಹಾಯಧನವನ್ನು ಚಾಲ್ತಿಯಲ್ಲಿರುವ ಕೈಗಾರಿಕಾ ನೀತಿಗಳಡಿಯಲ್ಲಿ ಘಟಕಗಳು ಹೂಡುವ ಸ್ಥಿರಾಸ್ತಿ ಬಂಡವಾಳದ ಮೇಲೆ ನಿಗದಿಪಡಿಸಿರುವ ಪ್ರಮಾಣದಂತೆ ವಲಯಗಳ ವರ್ಗೀಕರಣದ ಆಧಾರದಲ್ಲಿ ಮಂಜೂರು ಮಾಡಲಾಗುವುದು 2006–11ನೇ ಕೈಗಾರಿಕಾ ನೀತಿಯಲ್ಲಿ ಸಹಾಯಧನವು ವಲಯ–1 ಮತ್ತು 2 ರಲ್ಲಿ ಮಾತ್ರ ಲಭ್ಯವಿರುತ್ತದೆ ವಲಯ–1 ಶೇ 25 ರಂತೆ ಗರಿಷ್ಟ ಮಿತಿ ರೂ 15 00 ಲಕ್ಷ, ವಲಯ–2 ರಲ್ಲಿ ಶೇ 20 ರಂತೆ ಗರಿಷ್ಟ ಮಿತಿ 10 00 ಲಕ್ಷ, ಇದರ ಜೊತೆಗೆ

ವಲಯ 1 ಮತ್ತು 2 ರಲ್ಲಿ ಪರಿಶಿಷ್ಟ ಜಾತಿ / ಪಂಗಡ ಅಂಗವಿಕಲರು / ಅಲ್ಪಸಂಖ್ಯಾತರು / ಮಾಜಿ ಯೋಧರಿಗೆ ಶೇ 5 ರಷ್ಟು ಗರಿಷ್ಟ ಮಿತಿ ರೂ 1 00 ಲಕ್ಷ, ಮಹಿಳಾ ಉದ್ಯಮಿಗಳಿಗೆ ಶೆ 5 ರಷ್ಟು ರೂ 5 00 ಲಕ್ಷಗಳಿಗೆ ಮೀರದಂತೆ ನೀಡಲಾಗುವುದು

INVESTMENT SUBSIDY SANCTIONED TO SMALL SCALE INDUSTRIES

Sl No	Name of the District	No of units
1	Bangalore (Urban)	1335
2	Bangalore (Rural)	2005
3	Bagalkot	528
4	Belgaum	1598
5	Bellary	735
6	Bidar	606
7	Bijapur	630
8	Chamarajanagar	258
9	Chickmagalur	376
10	Chitradurga	506
11	Dakshina Kannada	1046
12	Davangere	351
13	Dharwad	813
14	Gadag	392
15	Gulbarga	737
16	Hassan	704
17	Haveri	308
18	Kodagu	188
19	Kolar	1985
20	Koppal	382
21	Mandya	433
22	Mysore	991

23	Raichur	321
24	Shimoga	515
25	Tumkur	1207
26	Udupi	1269
27	Uttara Kannada	1437
	Total	**21656**

31 (5) ಶ್ರೀ ಯೋಗೀಶ್ ಭಟ್ ಎನ್ (ಮಂಗಳೂರು) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷ ಆರ್ಥಿಕ ವಲಯದ ಬಗ್ಗೆ ಕಾದಿರಿಸಿದ ಸ್ಥಳಗಳಾವುವು ,

ಆ) ಈ ದಿಸೆಯಲ್ಲಿ ಆಗಿರುವ ಪ್ರಗತಿ ಎಷ್ಟು ,

ಇ) ಇಲ್ಲಿ ಬಂಡವಾಳ ಹೂಡಿಕೆಗೆ ಮುಂದೆ ಬಂದಿರುವ ಸಂಸ್ಥೆಗಳಾವುವು ,

ಈ) ಈ ಬಗ್ಗೆ ರಾಜ್ಯ ಕೇಂದ್ರ ಸರ್ಕಾರಗಳ ಕೊಡುಗೆಗಳೇನು (ಸಮಗ್ರ ಮಾಹಿತಿ ಒದಗಿಸುವುದು) ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಹಾಗೂ ಬಂಟ್ವಾಳ ತಾಲ್ಲೂಕುಗಳಲ್ಲಿ ವಿಶೇಷ ಆರ್ಥಿಕ ವಲಯಗಳು ಸ್ಥಾಪಿಸಲ್ಪಡುತ್ತಿವೆ

ಆ) ಮೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ ಇವರಿಗೆ ಬಂಟ್ವಾಳ ತಾಲ್ಲೂಕಿನಲ್ಲಿ 165 ಎಕರೆ ಪ್ರದೇಶದಲ್ಲಿ ಐಟಿ / ಐಟಿಇಎಸ್ ವಿಶೇಷ ಆರ್ಥಿಕ ವಲಯ ಸ್ಥಾಪಿಸಲು ಹಾಗೂ ಮೆ ಇನ್‌ಫೋಸಿಸ್ ಇವರಿಗೆ ಬಂಟ್ವಾಳ ತಾಲ್ಲೂಕಿನಲ್ಲಿ 377 ಎಕರೆ ಪ್ರದೇಶದಲ್ಲಿ ಐಟಿ / ಐಟಿಇಎಸ್ ವಿಶೇಷ ಆರ್ಥಿಕ ವಲಯ ಸ್ಥಾಪಿಸಲು ಭಾರತ ಸರ್ಕಾರದಿಂದ ನಿರ್ದಿಷ್ಟ ಅನುಮೋದನೆ ದೊರಕಿರುತ್ತದೆ

ಮೆ ಬಿ ಎ ಟಿಕ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಬಂಟ್ವಾಳ ತಾಲ್ಲೂಕಿನಲ್ಲಿ 29 ಎಕರೆ ಪ್ರದೇಶದಲ್ಲಿ ಐಟಿ / ಐಟಿಇಎಸ್ ವಿಶೇಷ ಆರ್ಥಿಕ ವಲಯ ಹಾಗೂ ಮೆ ಮಂಗಳೂರು ಎಸ್‌ಇಜೆಡ್ ಲಿಮಿಟೆಡ್ ಇವರಿಗೆ